

# ಕೆನ್ನೆ ಕೆಂಪಾದಾಗ...

ಪವಿತ್ರಾ ಭಟ್

ಕೆನ್ನೆ ಮೇಲೆ ಸೇಬಿದೆ, ಅಲ್ಲೇ ಗಿಳಿಯ
ಮೂಗಿದೆ
ತೊಂಡೆ ಹಣ್ಣು ತುಟಿಯಲಿ, ದಾಳಿಂಬೆ ಕಾಳು
ಬಾಯಲಿ...

ಹೆಣ್ಣಿನ ಸೌಂದರ್ಯ ಹೊಗಳುವಾಗಲೆಲ್ಲಾ ಈ ಹಾಡು ನೆನಪಾಗುತ್ತದೆ. ಅಂದದ ಕೆನ್ನೆಯನ್ನು ಇನ್ನಷ್ಟು ಚೆಂದಗೊಳಿಸಬೇಕು ಎನ್ನುವಾಗ ಮೊದಲ ಆಯ್ಕೆಯೇ ಮೇಕಪ್. ಹೀರೋಯಿನ್‌ಗಳಿಗೆಲ್ಲ ಅದೆಷ್ಟು ಚೆಂದದ ಕೆನ್ನೆ ಇರುತ್ತೆ, ನಕ್ಕಾಗಂತೂ ಕೆನ್ನೆ ಥೇಟ್ ಸೇಬು ಹಣ್ಣಾಗೆ ಕಾಣುತ್ತೆ ಅಂತಾ ಅದೆಷ್ಟು ಸಲ ಅಂದುಕೊಳ್ಳುತ್ತೀವೋ.. ಅವೆಲ್ಲ ಮೇಕಪ್ ಮಹಿಮೆ ಎನ್ನುವುದು ಸುಳ್ಳಲ್ಲ.

ಕೆಂಪೇರಿದ ಕೆನ್ನೆ, ನಡುವೊಂದು ಕುಳಿ, ನಸುನಗೆ ಬೀರಿದಾಗ ಅಂದವನ್ನು ಹೆಚ್ಚಿಸುವುದೇ ಕೆನ್ನೆಗಳು. ಕಣ್ಣು, ಹುಬ್ಬು, ತುಟಿ ಎಲ್ಲವನ್ನೂ ತಿದ್ದಿ ತೀಡಿದಾಗ ಕೆನ್ನೆಯನ್ನೂ ಒಪ್ಪವಾಗಿ ಕಾಣುವಂತೆ ಮಾಡುವುದು ಮೇಕಪ್ ಮಾಡುವವರ, ಮಾಡಿಕೊಳ್ಳುವವರ ಜವಾಬ್ದಾರಿ.

## ಹೊಳಪಿನ ಕೆನ್ನೆ ಪಡೆಯಲು..

ಆರಂಭದಲ್ಲಿ ಚರ್ಮವನ್ನು ಮೇಕಪ್‌ಗೆ ಸೆಟ್ ಮಾಡಿಕೊಳ್ಳಿ, ಅದಕ್ಕೆ ಮೊದಲು ಮಾಯಿಶ್ಚರೈಸರ್ ಹಚ್ಚಿಕೊಳ್ಳಿ. ನಂತರ ಚರ್ಮದ ಬಣ್ಣಕ್ಕೆ ತಕ್ಕ ಹಾಗೆ ಫೌಂಡೇಶನ್ ಹಚ್ಚಿ ಬ್ಲೆಂಡ್ ಮಾಡಿಕೊಳ್ಳಿ, ಅದಾದ ಮೇಲೆ ಕನ್ಸಿಲರ್ ಅನ್ವಯಿಸಿ. ಇವೆರಡು ಚರ್ಮದ ಟೋನ್ ಅನ್ನು ಸಮಗೊಳಿಸಲು ಸಹಾಯ ಮಾಡುತ್ತವೆ.

ಕಾಂಟೋರ್ ಬಳಕೆ ಮುಂದಿನ ಹಂತ. ಕೆನ್ನೆಗಳ ಮೇಲೆ ಶಾಡೋ ಕಾಣುವಂತೆ ಮಾಡಲು ಕಾಂಟೋರ್ ಸಹಾಯವಾಗುತ್ತೆ.

ಇದಾದ ನಂತರ ಬ್ರಾಂಜರ್ ಬಳಸಿ, ಇದನ್ನು ಕೆನ್ನೆಯ ಮೂಳೆ, ಹಣೆ, ಮೂಗಿನ ಬಳಿ ಹಚ್ಚಿದಾಗ ಮೇಕಪ್ ಆಕರ್ಷಣೀಯವಾಗಿ ಕಾಣುವಂತೆ ಮಾಡುತ್ತದೆ.

ಬ್ಲಶ್ ಹಚ್ಚುವುದೂ ಕೆನ್ನೆಯ ಸೌಂದರ್ಯಕ್ಕೆ ಅಗತ್ಯವಾಗಿರುತ್ತದೆ. ಕೆನ್ನೆಯ ಚರ್ಮದ ಬಣ್ಣ ಅಥವಾ ಯಾವ ಬಣ್ಣದಲ್ಲಿ ಹೊಳೆಯಬೇಕು ಎನ್ನುವ ಆಧಾರದಲ್ಲಿ ಬ್ಲಶ್ ಆಯ್ಕೆ ಮಾಡಿಕೊಳ್ಳಿ.

ಏಕೆಂದರೆ ಬ್ಲಶ್‌ನಲ್ಲೂ ಗುಲಾಬಿ ಬ್ಲಶ್, ಪ್ಲಮ್ ಬ್ಲಶ್, ಪೀಚ್ ಹೀಗೆ ಹಲವು ಆಯ್ಕೆಗಳಿವೆ. ಗುಲಾಬಿ ಬ್ಲಶ್ ಅನ್ನು ಕೆನ್ನೆ ಸೇಬುವಿನಂತೆ ಕೆಂಪಗೆ ಕಾಣಬೇಕೆಂದರೆ ಹಚ್ಚಿಕೊಳ್ಳಿ.

ಇನ್ನುಳಿದಂತೆ ಮಧ್ಯಮ ಅಥವಾ ಗಾಢ ಚರ್ಮವನ್ನು ಹೊಂದಿರುವವರು ಪ್ಲಮ್ ಬ್ಲಶ್ ಬಳಸಿ. ಚರ್ಮ ಬಿಳಿಯಾಗಿದ್ದರೆ ತಿಳಿ ಗುಲಾಬಿ ಬಣ್ಣದ ಬ್ಲಶ್‌ಗಳಂತೆಯೇ ಪ್ಲಮ್ ಬ್ಲಶ್ ಬಳಸಬಹುದು.

ಕೆನ್ನೆಯ ಉಬ್ಬಿದ ಭಾಗ ಮಾತ್ರ ಹೊಳೆಯುವಂತೆ ಕಾಣಲು ಪೀಚ್ ಬ್ಲಶ್ ಬಳಸಬಹುದು. ಇದನ್ನು ಹಚ್ಚುವಾಗ ಕೆನ್ನೆಯ ಮೂಳೆಗಳ ಬಳಿ ಮತ್ತು ಕಿವಿಯಿಂದ ಕೆನ್ನೆಯ ಉಬ್ಬಿದ ಭಾಗದವರೆಗೂ ಹಚ್ಚಿಕೊಳ್ಳಿ.

ಹೈಲೈಟರ್ ಬಳಕೆ ನಂತರದ ಹಂತ. ಕಣ್ಣಿನ ಕೆಳಭಾಗ– ಪಕ್ಕದ ಭಾಗ, ಮೂಗಿನ ಬಳಿ, ಹುಬ್ಬಿನ ಮೂಳೆಯ ಬಳಿ, ಹಣೆಯ ಮಧ್ಯಭಾಗ, ತುಟಿಯ ಮೇಲ್ಭಾಗದಲ್ಲಿ ಹೈಲೈಟರ್ ಹಚ್ಚು ಅಗತ್ಯವಾಗಿರುತ್ತದೆ. ಇದು ಮುಖದ ಅಂದವನ್ನು ಹೆಚ್ಚಿಸುತ್ತದೆ. ಗಲ್ಲದ ಬಳಿಯೂ ಹೈಲೈಟರ್ ಹಚ್ಚಬಹುದು. ಹೈಲೈಟರ್‌ನಲ್ಲಿ ಲಿಕ್ವಿಡ್ ಮತ್ತು ಪೌಡರ್ ಎರಡೂ ಆಯ್ಕೆಗಳಿವೆ. ಇದನ್ನು ಬಳಸುವಾಗ ಸ್ಪಾಂಜ್ ಬಳಸಿದರೆ ಉತ್ತಮ.

ಕೊನೆಯ ಹಂತವೇ ಸೆಟ್ಟಿಂಗ್ ಸ್ಪ್ರೇ ಅನ್ವಯಿಸುವುದು. ಬೆವರು, ಧೂಳು ಇನ್ನಿತರ ಕಾರಣದಿಂದ ಮೇಕಪ್ ಬೇಗನೆ ಮಾಸುತ್ತದೆ. ಇದನ್ನು ತಡೆಯಲು ಸೆಟ್ಟಿಂಗ್ ಸ್ಪ್ರೇ ಹಾಕಲಾಗುತ್ತದೆ. ಇದು ಮೇಕಪ್‌ಅನ್ನು ಲಾಕ್ ಮಾಡಿ, ದೀರ್ಘ ಕಾಲ ಇರುವಂತೆ ನೋಡಿಕೊಳ್ಳುತ್ತದೆ.

## ಟಿಪ್ಸ್ ಮರೆಯದಿರಿ

- ಕೆನ್ನೆಯ ಬಳಿ ಮೇಕಪ್ ಮಾಡುವಾಗ ನಾಜೂಕಿನಿಂದಿರಿ.
- ಯಾವುದನ್ನೂ ಅತಿಯಾಗಿ ಹಚ್ಚಬೇಡಿ. ಕೆನ್ನೆಯ ಮೇಲಿನ ಕಪ್ಪು ಕಲೆಗಳನ್ನು ಮರೆಮಾಚಲು ಫೌಂಡೇಶನ್, ಕನ್ಸಿಲರ್ ಹಚ್ಚಿ. ಚೆನ್ನಾಗಿ ಬ್ಲೆಂಡ್ ಮಾಡುವುದನ್ನು ಮರೆಯದಿರಿ.
- ಮೃದುವಾದ ಮೇಕಪ್ ಅಥವಾ ಹೊಳೆಯುವ ನೋಟ ಪಡೆಯಲು ಲಿಕ್ವಿಡ್ ಕನ್ಸಿಲರ್ ಬಳಸಿ.
- ಫೌಂಡೇಶನ್ ಹಸಿಯಾಗಿರುವಾಗಲೇ ಬ್ಲಶ್ ಹಚ್ಚಬೇಡಿ.
- ಕೆನ್ನೆಯ ಅಂದ ವೃದ್ಧಿಗೆ ಬ್ರಶ್‌ಗಳ ಬಳಕೆ ಬಗ್ಗೆಯೂ ಎಚ್ಚರಿಕೆಯಿರಲಿ.

## ಮುಖದ ಆಕಾರ ಗಮನಿಸಿಕೊಳ್ಳಿ

ಯಾವುದೇ ರೀತಿಯ ಮೇಕಪ್ ಮಾಡುವಾಗಲೂ ಮುಖದ ಆಕಾರ ಮತ್ತು ಚರ್ಮದ ಬಣ್ಣವನ್ನು ಗಮನದಲ್ಲಿರಿಸಿಕೊಳ್ಳುವುದು ಮುಖ್ಯ. ಇವೆಲ್ಲದಕ್ಕೂ ಸೂಕ್ತ ಬ್ರಶ್ ಬಳಸಿ.

ದುಂಡನೆ ಮುಖದವರು ಕೆನ್ನೆಯ ಭಾಗ ಸಣ್ಣದಾಗಿ ಕಾಣಲು ಕೆನ್ನೆಯ ಮೂಳೆಗಳ ಮೇಲೆ ಬ್ಲಶ್ ಅನ್ನು ಮೇಲ್ಮುಖವಾಗಿ ಹಚ್ಚಿ, ಬ್ರಶ್‌ನಿಂದ ವೃತ್ತಾಕಾರವಾಗಿ ಬ್ಲೆಂಡ್ ಮಾಡಿಕೊಳ್ಳಿ.

ಓವಲ್ ಆಕಾರದಲ್ಲಿ ಮುಖ ಇರುವವರು ಕೆನ್ನೆಯ ಮೂಳೆಗಳ ಬಳಿ ಬ್ಲಶ್ ಹಚ್ಚಿಕೊಳ್ಳಿ.

ಚೌಕಾಕಾರದ ಮುಖ ಇರುವವರು ಕೆನ್ನೆಯಿಂದ ಕಣ್ಣಿನ ಪಕ್ಕದಲ್ಲಿರುವ ಸಮತಟ್ಟಾದ ಜಾಗದವರೆಗೆ ಮೇಲ್ಮುಖವಾಗಿ ಬ್ಲಶ್ ಹಚ್ಚಿ ಬ್ಲೆಂಡ್ ಮಾಡಿ. ಇದು ಕೆನ್ನೆಯ ಭಾಗವನ್ನು ಮೃದುಗೊಳಿಸುತ್ತದೆ.

ಹೃದಯದಾಕಾರದ ಮುಖ ಇರುವವರು ಕಣ್ಣಿನ ಪಕ್ಕದಲ್ಲಿರುವ ಸಮತಟ್ಟಾದ ಜಾಗದಿಂದ ಕೆಳಮುಖವಾಗಿ ಕೆನ್ನೆಯವರೆಗೆ ಬ್ಲಶ್ ಎಳೆದುಕೊಳ್ಳಿ. ಇದು ಮುಖದ ಹೊಳಪನ್ನು ಹೆಚ್ಚಿಸುತ್ತದೆ.